# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 632 |
| ಸದಸ್ಯರ ಹೆಸರು | : ಶ್ರೀಮತಿ ಹೇಮಲತಾ ನಾಯಕ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 20.08.2026 |
| ಉತ್ತರಿಸುವ ಸಚಿವರು | : ಗೃಹ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | 2023-24ನೇ ಸಾಲಿನಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಅಕ್ರಮ ಮರಳು ಸಾಗಣೆ ಹಾಗೂ ಗಣಿಗಾರಿಕೆಗೆ ಸಂಬಂಧಿಸಿದಂತೆ ಎಷ್ಟು ಪ್ರಕರಣಗಳು ದಾಖಲಾಗಿವೆ (ಜಿಲ್ಲಾವಾರು ಹಾಗೂ ವರ್ಷವಾರು ವಿವರ ಒದಗಿಸುವುದು) | 2023-24ನೇ ಸಾಲಿನಿಂದ ಇಲ್ಲಿಯವರೆಗೆ ರಾಜ್ಯದಲ್ಲಿ ಅಕ್ರಮ ಮರಳು ಸಾಗಣೆ ಹಾಗೂ ಗಣಿಗಾರಿಕೆ ಸಂಬಂಧ ದಾಖಲಾದ ಪ್ರಕರಣಗಳ ವರ್ಷವಾರು ಮಾಹಿತಿ ಕೆಳಗಿನಂತಿದೆ:- |

| ವರ್ಷ | ಅಕ್ರಮ ಮರಳು ಸಾಗಣೆ ಪ್ರಕರಣಗಳ ಸಂಖ್ಯೆ | ಗಣಿಗಾರಿಕೆ ಸಂಬಂಧ ದಾಖಲಾದ ಪ್ರಕರಣಗಳ ಸಂಖ್ಯೆ |
|---|---|---|
| 2023 | 1455 | 35 |
| 2024 | 1326 | 40 |
| 2025 | 1350 | 61 |
| 2026 (31.07.26) | 1129 | 62 |

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ - ಅ ದಲ್ಲಿ ನೀಡಲಾಗಿದೆ.

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಆ | ಮೇಲ್ಕಂಡ ಪ್ರಕರಣಗಳಲ್ಲಿ ಎಷ್ಟು ಪ್ರಮಾಣದ ಮರಳನ್ನು ಜಪ್ತಿ ಮಾಡಲಾಗಿದೆ ಹಾಗೂ ಜಪ್ತಿ ಮಾಡಲಾದ ಮರಳಿನ ಅಂದಾಜು ಮೌಲ್ಯ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು) | 2023-24ನೇ ಸಾಲಿನಿಂದ ಇಲ್ಲಿಯವರೆಗೆ ದಾಖಲಾದ ಪ್ರಕರಣಗಳಲ್ಲಿ ಜಪ್ತಿ ಮಾಡಲಾದ ಮರಳಿನ ಪ್ರಮಾಣ ಹಾಗೂ ಜಪ್ತಿ ಮಾಡಲಾದ ಮರಳಿನ ಅಂದಾಜು ಮೌಲ್ಯದ ವಿವರಗಳನ್ನು ವರ್ಷವಾರು ಮಾಹಿತಿ ಕೆಳಗಿನಂತಿದೆ. |

| ವರ್ಷ | ಜಪ್ತಿ ಮಾಡಲಾದ ಮರಳಿನ ಪ್ರಮಾಣ (ಟನ್ ಗಳಲ್ಲಿ) | ಜಪ್ತಿ ಮಾಡಲಾದ ಮರಳಿನ ಅಂದಾಜು ಮೌಲ್ಯ (ರೂಗಳಲ್ಲಿ) |
|---|---|---|
| 2023 | 322486.26 | 10,50,60,638.24 |
| 2024 | 380794.19 | 13,86,81,652.4 |
| 2025 | 509873.07 | 9,85,37,719 |
| 2026 (31.07.26) | 3236285.53 | 29,75,63,340.6 |

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ - ಅ ದಲ್ಲಿ ನೀಡಲಾಗಿದೆ.

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಇ | ದಾಖಲಾಗಿರುವ ಪ್ರಕರಣಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ಆರೋಪಪಟ್ಟಿ (Charge Sheet)) ಸಲ್ಲಿಸಲಾಗಿದೆ ಹಾಗೂ ಇನ್ನೂ ಎಷ್ಟು ಪ್ರಕರಣಗಳು ಬಾಕಿ ಇವೆ (ಜಿಲ್ಲಾವಾರು ಹಾಗೂ ವರ್ಷವಾರು ವಿವರ ಒದಗಿಸುವುದು) | ದಾಖಲಾಗಿರುವ ಪ್ರಕರಣಗಳಲ್ಲಿ ಆರೋಪಪಟ್ಟಿ (Charge Sheet)) ಸಲ್ಲಿಸಲಾದ ಹಾಗೂ ಇನ್ನೂ ಆರೋಪಪಟ್ಟಿ (Charge Sheet)) ಸಲ್ಲಿಸದೇ ಇರುವ ಪ್ರಕರಣಗಳ ವರ್ಷವಾರು ಮಾಹಿತಿ ಕೆಳಗಿನಂತಿದೆ:- |

| ವರ್ಷ | ದಾಖಲಾದ ಪ್ರಕರಣಗಳ ಪೈಕಿ ಚಾರ್ಜ್ ಶೀಟ್ ಸಲ್ಲಿಸಲಾದ ಪ್ರಕರಣಗಳ ಸಂಖ್ಯೆ | ದಾಖಲಾದ ಪ್ರಕರಣಗಳ ಪೈಕಿ ಚಾರ್ಜ್ ಶೀಟ್ ಸಲ್ಲಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|
| 2023 | 1472 | 20 |
| 2024 | 1351 | 26 |
| 2025 | 1354 | 66 |
| 2026 (31.07.26) | 701 | 425 |

| | | |
|---|---|---|
| | | ಜಿಲ್ಲಾವಾರು ಮಾಹಿತಿಯನ್ನು ಅನುಬಂಧ - ೩ ರಲ್ಲಿ ನೀಡಲಾಗಿದೆ. |
| ಈ | ಅಕ್ರಮ ಮರಳು ಸಾಗಣೆ ಮತ್ತು ಗಣಿಗಾರಿಕೆ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ನಿಯಂತ್ರಿಸಲು ಸರ್ಕಾರ ಕೈಗೊಳ್ಳಲಿರುವ ಕಟ್ಟುನಿಟ್ಟಿನ ಕ್ರಮಗಳೇನು? | ಅಕ್ರಮ ಮರಳು ಸಾಗಾಣಿಕೆ ಮತ್ತು ಗಣಿಗಾರಿಕೆ ಪ್ರಕರಣಗಳನ್ನು ನಿಯಂತ್ರಿಸಲು ಕೈಗೊಂಡ ಕ್ರಮ:<br>ಅಕ್ರಮ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ತಡೆಗಟ್ಟಲು ಸುತ್ತೋಲೆ ಸಂಖ್ಯೆ ಕಾಮತ್ತುಸು/ ಮಿಶ್ರ/120/2026 ದಿನಾಂಕ: 18.07.2026 ರಲ್ಲಿ ಎಲ್ಲಾ ಘಟಕಾಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸಲಾಗಿದೆ. (ಪ್ರತಿ ಲಗತ್ತಿಸಿದೆ)<br>1. ಅಕ್ರಮ ಮರಳು ಸಾಗಾಣಿಕೆ ಮತ್ತು ಗಣಿಗಾರಿಕೆ ಮಾಡಿದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಅಲ್ಲದೇ ಅಕ್ರಮ ಮರಳು ಸಂಗ್ರಹದ ವಿರುದ್ಧ ದಾಳಿ ಮಾಡಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಗೆ ಮಾಹಿತಿ ನೀಡಿ ದಾಳಿ ಮಾಡಿಸಲಾಗುತ್ತದೆ. ಹೆಚ್ಚುವರಿ ತೂಕ ಸಾಗಾಟ ಮಾಡುವವರ ವಿರುದ್ಧವೂ ಕ್ರಮ ಕೈಗೊಂಡು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ದಂಡ ವಿಧಿಸಲಾಗಿದೆ.<br>2. ಅರಣ್ಯ, ಕಂದಾಯ, ಲೋಕೋಪಯೋಗಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಇತರ ಇಲಾಖೆಗಳಿಗೆ ಅಗತ್ಯ ಸಹಕಾರವನ್ನು ಒದಗಿಸಿ ಯಾವುದೇ ಅಕ್ರಮ ಮರಳು ಸಾಗಾಣಿಕೆ ನಡೆಯದಂತೆ ಕ್ರಮ ಕೈಗೊಳ್ಳಲಾಗುತ್ತಿದೆ<br>3. ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಮರಳು ಸಾಗಿಸುವ ವಾಹನಗಳನ್ನು ನಿಯಮಿತವಾಗಿ ತಪಾಸಣೆ ಮಾಡಿ, ನಕಲಿ ಪರ್ಮಿಟ್‌ಗಳನ್ನು ಪಡೆದು ಮರಳನ್ನು ಸಾಗಿಸುವ ವಾಹನಗಳ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳುವ ಕುರಿತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯೊಂದಿಗೆ ಸ್ಪಷ್ಟತೆಯ ಕುರಿತು ಮಾಹಿತಿ ಪಡೆಯಲಾಗುತ್ತಿದೆ ಮತ್ತು ಅವರಿಗೂ ಕೂಡ ಈ ಕುರಿತು ತಪಾಸಣೆ ಮಾಡುವಂತೆ ಕೋರಲಾಗಿದೆ.<br>4. ಚೆಕ್‌ಪೋಸ್ಟ್ ಗಳಲ್ಲಿ ನಿರಂತರವಾಗಿ ಸಿಬ್ಬಂದಿಗಳನ್ನು ನೇಮಿಸಿ ವಾಹನಗಳನ್ನು ತಪಾಸಣೆ ಮಾಡಿ, ಮರಳು ಸಾಗಾಣಿಕೆಯಾಗುತ್ತಿದ್ದುದು ಕಂಡು ಬಂದಲ್ಲಿ ಕೂಡಲೇ ಕಾನೂನು ಕ್ರಮ ಜರುಗಿಸಲಾಗುತ್ತಿದೆ.<br>5. ಅಕ್ರಮ ಮರಳು ಸಾಗಾಣಿಕೆ ತಡೆಗಟ್ಟಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕಂದಾಯ ಇಲಾಖೆ, ಲೋಕೋಪಯೋಗಿ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿ/ ಸಿಬ್ಬಂದಿಗಳನ್ನೊಳಗೊಂಡ ಸ್ಪೆಷಲ್ ಟಾಸ್ಕ್ ಫೋರ್ಸ್ ಅನ್ನು ರಚಿಸಲಾಗಿದೆ ಅಲ್ಲದೇ, ಅಕ್ರಮ ಮರಳು ಸಾಗಾಣಿಕೆ ನಡೆಯುವ ತಾಲ್ಲೂಕುಗಳಲ್ಲಿ ಮರಳು ತಪಾಸಣೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. |

ಹೆಚ್‌ಡಿ 472 ಎಸ್‌ಎಸ್‌ಟಿ 2026

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು.

## ಅನುಬಂಧ - ಅ

### ದಾಖಲಾದ ಅಕ್ರಮ ಮರಳು ಸಾಗಣೆ / ಗಣಿಗಾರಿಕೆ ಪ್ರಕರಣಗಳ ಸಂಖ್ಯೆ

| ಘಟಕ | 2023 | 2024 | 2025 | 2026 | 2023 | 2024 | 2025 | 2026 |
|---|---|---|---|---|---|---|---|---|
| | ದಾಖಲಾದ ಅಕ್ರಮ ಮರಳು ಸಾಗಣೆ ಪ್ರಕರಣಗಳ ಸಂಖ್ಯೆ | | | | ದಾಖಲಾದ ಗಣಿಗಾರಿಕೆ ಪ್ರಕರಣಗಳ ಸಂಖ್ಯೆ | | | |
| ]ಬೆಂಗಳೂರು ನಗರ | 0 | 0 | 0 | 0 | 0 | 1 | 2 | 1 |
| ಮೈಸೂರು ನಗರ | 0 | 0 | 0 | 0 | 0 | 0 | 0 | 0 |
| ಹುಬ್ಬಳ್ಳಿ-ಧಾರವಾಡ ನಗರ | 0 | 0 | 0 | 0 | 0 | 0 | 0 | 0 |
| ಮಂಗಳೂರು ನಗರ | 20 | 56 | 59 | 21 | 11 | 4 | 9 | 1 |
| ಬೆಳಗಾವಿ ನಗರ | 0 | 0 | 0 | 0 | 0 | 0 | 0 | 0 |
| ಕಲಬುರಗಿ ನಗರ | 2 | 0 | 1 | 7 | 0 | 0 | 0 | 0 |
| ಬೆಂಗಳೂರು ಜಿಲ್ಲೆ | 0 | 0 | 0 | 0 | 0 | 0 | 0 | 0 |
| ತುಮಕೂರು ಜಿಲ್ಲೆ | 66 | 29 | 21 | 8 | 0 | 0 | 0 | 1 |
| ಕೋಲಾರ ಜಿಲ್ಲೆ | 2 | 0 | 3 | 1 | 0 | 0 | 0 | 0 |
| ಬೆಂಗಳೂರು ದಕ್ಷಿಣ ಜಿಲ್ಲೆ | 2 | 2 | 0 | 1 | 0 | 0 | 0 | 0 |
| ಚಿಕ್ಕಬಳ್ಳಾಪುರ ಜಿಲ್ಲೆ | 5 | 1 | 0 | 0 | 0 | 0 | 0 | 0 |
| ಕೆ.ಜಿ.ಎಫ್. | 0 | 0 | 0 | 0 | 0 | 0 | 0 | 0 |
| ಮೈಸೂರು ಜಿಲ್ಲೆ | 31 | 11 | 4 | 5 | 0 | 0 | 0 | 0 |
| ಮಂಡ್ಯ ಜಿಲ್ಲೆ | 5 | 3 | 0 | 1 | 0 | 2 | 0 | 0 |
| ಹಾಸನ ಜಿಲ್ಲೆ | 70 | 55 | 29 | 16 | 0 | 0 | 0 | 0 |
| ಕೊಡಗು | 2 | 4 | 3 | 3 | 0 | 0 | 0 | 0 |
| ಚಾಮರಾಜನಗರ ಜಿಲ್ಲೆ | 2 | 0 | 6 | 5 | 0 | 0 | 0 | 0 |
| ಬೆಳಗಾವಿ ಜಿಲ್ಲೆ | 30 | 14 | 8 | 14 | 0 | 0 | 0 | 0 |
| ವಿಜಯಾಪುರ ಜಿಲ್ಲೆ | 29 | 34 | 14 | 10 | 0 | 0 | 0 | 0 |
| ಧಾರವಾಡ ಜಿಲ್ಲೆ | 0 | 1 | 0 | 0 | 0 | 1 | 0 | 0 |
| ಬಾಗಲಕೋಟೆ ಜಿಲ್ಲೆ | 12 | 11 | 11 | 58 | 0 | 0 | 0 | 0 |
| ಗದಗ ಜಿಲ್ಲೆ | 41 | 26 | 47 | 11 | 0 | 0 | 0 | 0 |
| ಚಿತ್ರದುರ್ಗ ಜಿಲ್ಲೆ | 78 | 42 | 48 | 13 | 0 | 0 | 0 | 0 |
| ಹಾವೇರಿ ಜಿಲ್ಲೆ | 52 | 74 | 74 | 60 | 3 | 4 | 3 | 4 |
| ಶಿವಮೊಗ್ಗ ಜಿಲ್ಲೆ | 32 | 10 | 44 | 10 | 10 | 7 | 6 | 31 |
| ದಾವಣಗೆರೆ ಜಿಲ್ಲೆ | 81 | 8 | 26 | 27 | 0 | 0 | 0 | 0 |
| ದಕ್ಷಿಣ ಕನ್ನಡ ಜಿಲ್ಲೆ | 12 | 59 | 33 | 59 | 0 | 0 | 0 | 0 |
| ಉತ್ತರ ಕನ್ನಡ ಜಿಲ್ಲೆ | 0 | 9 | 21 | 12 | 0 | 0 | 0 | 0 |
| ಚಿಕ್ಕಮಗಳೂರು ಜಿಲ್ಲೆ | 21 | 22 | 21 | 15 | 0 | 0 | 0 | 0 |
| ಉಡುಪಿ ಜಿಲ್ಲೆ | 19 | 106 | 69 | 16 | 8 | 17 | 27 | 10 |
| ಬಳ್ಳಾರಿ ಜಿಲ್ಲೆ | 74 | 73 | 70 | 94 | 0 | 0 | 0 | 0 |
| ಕಲಬುರಗಿ ಜಿಲ್ಲೆ | 178 | 191 | 155 | 118 | 0 | 0 | 0 | 0 |
| ಬೀದರ್ ಜಿಲ್ಲೆ | 0 | 3 | 3 | 2 | 0 | 1 | 1 | 0 |
| ರಾಯಚೂರು ಜಿಲ್ಲೆ | 297 | 267 | 362 | 386 | 0 | 0 | 0 | 0 |
| ಕೊಪ್ಪಳ ಜಿಲ್ಲೆ | 70 | 54 | 54 | 27 | 0 | 0 | 3 | 6 |
| ಯಾದಗಿರಿ ಜಿಲ್ಲೆ | 107 | 94 | 84 | 95 | 3 | 3 | 10 | 8 |
| ವಿಜಯನಗರ ಜಿಲ್ಲೆ | 115 | 67 | 80 | 34 | 0 | 0 | 0 | 0 |
| **ಒಟ್ಟು** | **1455** | **1326** | **1350** | **1129** | **35** | **40** | **61** | **62** |

## ಅನುಬಂಧ - ಆ
## ಜಪ್ತಿ ಮಾಡಲಾದ ಮರಳಿನ ಪ್ರಮಾಣ / ಮೌಲ್ಯ

| ಘಟಕ | 2023 | 2024 | 2025 | 2026 | 2023 | 2024 | 2025 | 2026 |
|---|---|---|---|---|---|---|---|---|
| | ಜಪ್ತಿ ಮಾಡಲಾದ ಮರಳಿನ ಪ್ರಮಾಣ | | | | ಜಪ್ತಿ ಮಾಡಲಾದ ಮರಳಿನ ಅಂದಾಜು ಮೌಲ್ಯ | | | |
| ಬೆಂಗಳೂರು ನಗರ | 0 | 0 | 0 | 0 | 0 | 0 | 0 | 0 |
| ಮೈಸೂರು ನಗರ | 0 | 0 | 0 | 0 | 0 | 0 | 0 | 0 |
| ಹುಬ್ಬಳ್ಳಿ-ಧಾರವಾಡ ನಗರ | 0 | 0 | 0 | 0 | 0 | 0 | 0 | 0 |
| ಮಂಗಳೂರು ನಗರ | 530 | 870 | 1135 | 1217 | 318000 | 522000 | 730000 | 779700 |
| ಬೆಳಗಾವಿ ನಗರ | 0 | 0 | 0 | 0 | 0 | 0 | 0 | 0 |
| ಕಲಬುರಗಿ ನಗರ | 280.30 | 0 | 54 | 189 | 685058 | 0 | 50000 | 70000 |
| ಬೆಂಗಳೂರು ಜಿಲ್ಲೆ | 0 | 0 | 0 | 0 | 0 | 0 | 0 | 0 |
| ತುಮಕೂರು | 126.72 | 38.72 | 29.92 | 17.6 | 3982320 | 120032 | 927520 | 545600 |
| ಕೋಲಾರ ಜಿಲ್ಲೆ | 10 | 0 | 3 | 1 | 40000 | 0 | 13500 | 3500 |
| ಬೆಂಗಳೂರು ದಕ್ಷಿಣ ಜಿಲ್ಲೆ | 25 | 25 | 0 | 3.5 | 25000 | 22000 | 0 | 50000 |
| ಚಿಕ್ಕಬಳ್ಳಾಪುರ | 9.5 | 2 | 0 | 0 | 27500 | 6000 | 0 | 0 |
| ಕೆ.ಜಿ.ಎಫ್. | 0 | 0 | 0 | 0 | 0 | 0 | 0 | 0 |
| ಮೈಸೂರು ಜಿಲ್ಲೆ | 183.38 | 103.8 | 30.98 | 25.95 | 137168.24 | 77642.4 | 23173 | 19410.6 |
| ಮಂಡ್ಯ ಜಿಲ್ಲೆ | 23650 | 36 | 0 | 4 | 34170 | 50000 | 0 | 5000 |
| ಹಾಸನ ಜಿಲ್ಲೆ | 283 | 318 | 190 | 245 | 175697 | 352945 | 228027 | 338401 |
| ಕೊಡಗು | 14 | 22 | 28 | 18 | 43120 | 67760 | 86240 | 55440 |
| ಚಾಮರಾಜನಗರ | 2.86 | 0 | 35.25 | 3.06 | 2043 | 0 | 23110 | 3893 |
| ಬೆಳಗಾವಿ ಜಿಲ್ಲೆ | 364 | 170 | 96 | 142 | 461900 | 217000 | 4813000 | 190500 |
| ವಿಜಯಾಪುರ | 7771.2 | 536.28 | 58.50 | 190.13 | 898040 | 209500 | 28000 | 88000 |
| ಧಾರವಾಡ ಜಿಲ್ಲೆ | 0 | 15 | 0 | 0 | 0 | 25000 | 0 | 0 |
| ಬಾಗಲಕೋಟೆ | 244 | 67 | 120 | 3735.01 | 210000 | 123820 | 78200 | 9345630 |
| ಗದಗ ಜಿಲ್ಲೆ | 401.6 | 230.4 | 313.6 | 68.8 | 392500 | 261000 | 393000 | 55600 |
| ಚಿತ್ರದುರ್ಗ ಜಿಲ್ಲೆ | 395.72 | 179.86 | 283.1 | 63 | 543641 | 225555 | 322076 | 52690 |
| ಹಾವೇರಿ ಜಿಲ್ಲೆ | 373.24 | 2509.48 | 1706.24 | 1910.92 | 344300 | 902112 | 1278262 | 87225 |
| ಶಿವಮೊಗ್ಗ ಜಿಲ್ಲೆ | 31000 | 100000 | 327000 | 2883000 | 649739 | 520000 | 1166000 | 3273800 |
| ದಾವಣಗೆರೆ ಜಿಲ್ಲೆ | 2098.92 | 56.82 | 610.50 | 278.60 | 2302652 | 56500 | 623500 | 325000 |
| ದಕ್ಷಿಣ ಕನ್ನಡ | 185 | 364 | 710 | 611.7 | 212500 | 346100 | 354500 | 748875 |
| ಉತ್ತರ ಕನ್ನಡ | 0 | 125 | 279 | 116 | 0 | 85500 | 262500 | 72000 |
| ಚಿಕ್ಕಮಗಳೂರು | 72.32 | 69.57 | 55.03 | 55.03 | 92000 | 88500 | 89500 | 70000 |
| ಉಡುಪಿ ಜಿಲ್ಲೆ | 138 | 1032 | 738 | 1168 | 214000 | 1303400 | 992500 | 1101000 |
| ಬಳ್ಳಾರಿ ಜಿಲ್ಲೆ | 155 | 283 | 429 | 282 | 165000 | 308000 | 466660 | 334500 |
| ಕಲಬುರಗಿ ಜಿಲ್ಲೆ | 3982 | 9197 | 1024 | 918 | 4220961 | 16099616 | 1249780 | 1285756 |
| ಬೀದರ್ ಜಿಲ್ಲೆ | 0 | 100 | 25 | 20 | 0 | 50000 | 12500 | 10000 |
| ರಾಯಚೂರು | 28740.16 | 69125.41 | 5531.45 | 2500.71 | 30512750 | 55029020 | 2873926 | 1833560 |
| ಕೊಪ್ಪಳ ಜಿಲ್ಲೆ | 33832 | 17760 | 120458.4 | 6695.2 | 657375 | 595300 | 10749113 | 736000 |
| ಯಾದಗಿರಿ ಜಿಲ್ಲೆ | 179497.34 | 155339.85 | 15411.10 | 332741.32 | 57582034 | 60516900 | 70117900 | 275996500 |
| ವಿಜಯನಗರ | 8121 | 22218 | 33518 | 65 | 131170 | 500450 | 585232 | 85760 |
| **ಒಟ್ಟು** | **322486.26** | **380794.19** | **509873.07** | **3236285.53** | **105060638.24** | **138681652.4** | **98537719** | **297563340.6** |

## ಅನುಬಂಧ - ಇ

### ಚಾರ್ಜ್ ಶೀಟ್ ಸಲ್ಲಿಸಲಾದ ಪ್ರಕರಣಗಳ ಸಂಖ್ಯೆ / ಜಪ್ತಿ ಮಾಡಲಾದ ಮರಳಿನ ಅಂದಾಜು ಮೌಲ್ಯ

| ಘಟಕ | 2023 | 2024 | 2025 | 2026 | 2023 | 2024 | 2025 | 2026 |
|---|---|---|---|---|---|---|---|---|
| | ದಾಖಲಾದ ಪ್ರಕರಣಗಳ ಪೈಕಿ ಚಾರ್ಜ್ ಶೀಟ್ ಸಲ್ಲಿಸಲಾದ ಪ್ರಕರಣಗಳ ಸಂಖ್ಯೆ | | | | ದಾಖಲಾದ ಪ್ರಕರಣಗಳ ಪೈಕಿ ಚಾರ್ಜ್ ಶೀಟ್ ಸಲ್ಲಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ | | | |
| ಬೆಂಗಳೂರು ನಗರ | 0 | 1 | 1 | 0 | 0 | 0 | 1 | 1 |
| ಮೈಸೂರು ನಗರ | 0 | 0 | 0 | 0 | 0 | 0 | 0 | 0 |
| ಹುಬ್ಬಳ್ಳಿ-ಧಾರವಾಡ ನಗರ | 0 | 0 | 0 | 0 | 0 | 0 | 0 | 0 |
| ಮಂಗಳೂರು ನಗರ | 31 | 60 | 66 | 4 | 0 | 0 | 2 | 18 |
| ಬೆಳಗಾವಿ ನಗರ | 0 | 0 | 0 | 0 | 0 | 0 | 0 | 0 |
| ಕಲಬುರಗಿ ನಗರ | 2 | 0 | 1 | 7 | 0 | 0 | 0 | 0 |
| ಬೆಂಗಳೂರು ಜಿಲ್ಲೆ | 29 | 34 | 14 | 6 | 0 | 0 | 0 | 4 |
| ತುಮಕೂರು ಜಿಲ್ಲೆ | 66 | 29 | 21 | 9 | 0 | 0 | 0 | 6 |
| ಕೋಲಾರ ಜಿಲ್ಲೆ | 2 | 0 | 3 | 1 | 0 | 0 | 0 | 0 |
| ಬೆಂಗಳೂರು ದಕ್ಷಿಣ ಜಿಲ್ಲೆ | 2 | 2 | 0 | 0 | 0 | 0 | 0 | 1 |
| ಚಿಕ್ಕಬಳ್ಳಾಪುರ ಜಿಲ್ಲೆ | 5 | 1 | 0 | 0 | 0 | 0 | 0 | 0 |
| ಕೆ.ಜಿ.ಎಫ್. | 0 | 0 | 0 | 0 | 0 | 0 | 0 | 0 |
| ಮೈಸೂರು ಜಿಲ್ಲೆ | 31 | 11 | 4 | 3 | 0 | 0 | 0 | 2 |
| ಮಂಡ್ಯ ಜಿಲ್ಲೆ | 5 | 5 | 0 | 1 | 0 | 0 | 0 | 0 |
| ಹಾಸನ ಜಿಲ್ಲೆ | 70 | 54 | 29 | 14 | 0 | 1 | 0 | 2 |
| ಕೊಡಗು | 2 | 4 | 2 | 3 | 0 | 0 | 0 | 0 |
| ಚಾಮರಾಜನಗರ ಜಿಲ್ಲೆ | 2 | 0 | 6 | 0 | 0 | 0 | 0 | 3 |
| ಬೆಳಗಾವಿ ಜಿಲ್ಲೆ | 30 | 14 | 8 | 14 | 0 | 0 | 0 | 0 |
| ವಿಜಯಪುರ ಜಿಲ್ಲೆ | 29 | 34 | 14 | 6 | 0 | 0 | 0 | 4 |
| ಧಾರವಾಡ ಜಿಲ್ಲೆ | 0 | 1 | 0 | 0 | 0 | 0 | 0 | 0 |
| ಬಾಗಲಕೋಟೆ ಜಿಲ್ಲೆ | 12 | 11 | 11 | 58 | 0 | 0 | 0 | 56 |
| ಗದಗ ಜಿಲ್ಲೆ | 31 | 20 | 42 | 8 | 10 | 5 | 5 | 3 |
| ಚಿತ್ರದುರ್ಗ ಜಿಲ್ಲೆ | 77 | 42 | 47 | 3 | 0 | 0 | 1 | 10 |
| ಹಾವೇರಿ ಜಿಲ್ಲೆ | 55 | 78 | 77 | 42 | 0 | 0 | 0 | 22 |
| ಶಿವಮೊಗ್ಗ ಜಿಲ್ಲೆ | 42 | 16 | 45 | 24 | 0 | 1 | 5 | 17 |
| ದಾವಣಗೆರೆ ಜಿಲ್ಲೆ | 73 | 4 | 14 | 15 | 8 | 4 | 12 | 12 |
| ದಕ್ಷಿಣ ಕನ್ನಡ ಜಿಲ್ಲೆ | 11 | 45 | 30 | 30 | 0 | 0 | 3 | 29 |
| ಉತ್ತರ ಕನ್ನಡ ಜಿಲ್ಲೆ | 0 | 8 | 20 | 10 | 0 | 1 | 1 | 1 |
| ಚಿಕ್ಕಮಗಳೂರು ಜಿಲ್ಲೆ | 21 | 22 | 21 | 11 | 0 | 0 | 0 | 4 |
| ಉಡುಪಿ ಜಿಲ್ಲೆ | 27 | 122 | 90 | 11 | 0 | 1 | 6 | 15 |
| ಬಳ್ಳಾರಿ ಜಿಲ್ಲೆ | 73 | 73 | 65 | 48 | 0 | 0 | 5 | 46 |
| ಕಲಬುರಗಿ ಜಿಲ್ಲೆ | 152 | 171 | 131 | 39 | 2 | 13 | 20 | 76 |
| ಬೀದರ್ ಜಿಲ್ಲೆ | 0 | 4 | 4 | 2 | 0 | 0 | 0 | 0 |
| ರಾಯಚೂರು ಜಿಲ್ಲೆ | 297 | 267 | 362 | 255 | 0 | 0 | 0 | 0 |
| ಕೊಪ್ಪಳ ಜಿಲ್ಲೆ | 70 | 54 | 53 | 21 | 0 | 0 | 4 | 12 |
| ಯಾದಗಿರಿ ಜಿಲ್ಲೆ | 110 | 97 | 93 | 37 | 0 | 0 | 1 | 66 |
| ವಿಜಯನಗರ ಜಿಲ್ಲೆ | 115 | 67 | 80 | 19 | 0 | 0 | 0 | 15 |
| **ಒಟ್ಟು** | **1472** | **1351** | **1354** | **701** | **20** | **26** | **66** | **425** |

Government of Karnataka
(Police Department)

No: L&O/MISC/120/2026

Office of the
Director General and Inspector
General of Police,
Karnataka State, Bengaluru.
Date:18.07.2026

# CIRCULAR

**Sub:** Regarding measures to be taken to prevent illegal sand mining and transportation.

**Ref:** 1. Karnataka Minor Mineral Concession Rules 1994
2. The Karnataka Mineral (Regulation and Transport) Rules 2008
3. The Karnataka (Prevention of Illegal Mining, Transportation and Storage of Minerals) Rules-2011
4. Government Order No.: CI 21 MMN(2) 2014, Bangalore Date: 21-01-2014.
5. This Office Circular No:L&O/MISC/51/2016-17, dated:20.07.2016.

* * * * *

It has been observed that illegal sand mining, storage, and unauthorized transportation continue to adversely affect law and order, environmental protection, and Government revenue. In order to ensure uniform and effective enforcement of the prescribed preventive and legal measures by all field units, the instructions issued vide Reference (5) are hereby reiterated and reproduced for strict compliance. All Unit Officers shall meticulously implement these instructions and ensure that prompt and effective legal action is taken against all persons involved in such illegal activities, without exception.

Sand mining and transportation in the State, both locally and inter-State, is prohibited without an official license as per the rules/notifications mentioned in references (1) and (3). Unauthorized sand mining, transportation and collection is a punishable offence. However, complaints are being received about this business going on unabated in the State, which is causing inconvenience to the Government and the Department. It is apparent that the Task Force constituted under reference (1) have failed to function effectively.

As per the rules mentioned in reference (1), Task Force have been constituted at the district level under the chairmanship of the Deputy Commissioner and the concerned Police Commissioners/District Superintendents of Police are the members of this committee. Similarly, at the taluk level Task Force has been constituted under the chairmanship of the Assistant Commissioner (Revenue) and the concerned Police Inspector/Sub-Inspector is a member. The said rules have stipulated the scope of work and work activities/responsibilities/accountability of the committee and it is the responsibility and duty of the District and Taluk level Task Force to take strict action against illegal sand mining and illegal sand transportation. The concerned police officers in the said task forces are the members of the committee. The department has a great responsibility to effectively control this menace by coordinating with the other departments.

In the government order mentioned in reference (4), a notification has been issued determining the scope of work of the officers of the Mines and Geology Department, Revenue Department, Forest Department and Police Department to monitor illegal sand transportation. As per this order, police officers have been empowered to take action against illegal sand mining, transportation and collection within their jurisdiction, and accordingly, all unit officers of the Police Department have been instructed to take the following action.

1. Preventing illegal sand mining, transportation and storage is the responsibility of the Task Force of the respective area. No kind of illegality will be tolerated in this regard (Zero tolerance).
2. The unit officers should identify the illegal sand mining centers coming under the jurisdiction of their unit, monitor such centers and take action using their authority to completely eradicate illegal sand mining, and also take action through the district level / taluk level Task force.
3. The unit officers should take action to ensure that they coordinate with the investigation centers started by the Department of Mines and Geology to prevent illegal sand transportation at the inter-state borders coming under their jurisdiction and perform their duties effectively. It has been instructed to immediately recommend to the concerned disciplinary authority for necessary disciplinary action against such officer/staff without delay if any information is received about any illegality in these centers.
4. To ensure that the necessary basic facilities are available in the investigation centers as per the rules as per the rule 6 of the Karnataka Prevention of Illegal Mining, Transportation and Storage Mineral Rules 2011. In case of lack of such basic facilities, the unit officers have been instructed to bring this matter to the notice of the Principal Secretary, Mines and Geology Department.

5. During the monthly crime meeting, the unit officers shall review the illegal sand mining, transportation and storage station-wise and strictly issue necessary suggestions and instructions to the subordinate officers. Similarly, as per reference (4), district and taluk Task Force meetings (once every two months) should be held and steps should be taken there with all the departments to effectively prevent this menace.
6. The unit officers should collect intelligence about the illegal sand business, conduct surprise raids and take appropriate disciplinary action against the officers concerned.
7. Action should be taken under the Goonda Act against the accused who are habitually involved in the illegal sand business in their respective jurisdictions. The unit officers should personally pay attention to this matter.
8. If the unit officers fail to prevent illegal sand mining and transportation in their jurisdictions, appropriate disciplinary action will be taken against such unit officers.

All officers shall acknowledge this circular and ensure its strict compliance in letter and spirit.

18/7/16

**(Dr. M.A. SALEEM, IPS)**
Director General and
Inspector General of Police,
Karnataka State.

To;

1. All Commissioners of Police
2. All Range IGs/DIGs of Police
3. All Superintendents of Police (including K.G.F and Railways).

Copy with compliments to;

1. The Additional Chief Secretary, Home Department, Vidhana Soudha, Bangalore.
2. The Principal Secretary, Mines and Geology Department, Vidhana Soudha, Bangalore.

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂಖ್ಯೆ: ಕಾಮತ್ತುಸು/ಮಿಶ್ರ/51/2016-17

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್
ಆಫ್ ಪೊಲೀಸ್ ರವರ ಕಾರ್ಯಾಲಯ,
ಕರ್ನಾಟಕ ರಾಜ್ಯ, ಬೆಂಗಳೂರು.
ದಿನಾಂಕ: 20.07.2016

## ಸುತ್ತೋಲೆ

ವಿಷಯ: ಅಕ್ರಮ ಮರಳು ಸಾಗಾಣಿಕೆಯನ್ನು ತಡೆಗಟ್ಟುವ ಬಗ್ಗೆ,
ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು.

ಉಲ್ಲೇಖ:1) ಕರ್ನಾಟಕ ಮೈನರ್ ಮಿನರಲ್ ಕನ್ಸೆಷನ್ ರೂಲ್ಸ್ 1994
2) ದಿ ಕರ್ನಾಟಕ ಮಿನರಲ್ (ರೆಗ್ಯೂಲೇಷನ್ ಅಂಡ್ ಟ್ರಾನ್ಸ್‌ಪೋರ್ಟ್) ರೂಲ್ಸ್ 2008
3) ದಿ ಕರ್ನಾಟಕ (ಪ್ರಿವೆನ್ಷನ್ ಆಫ್ ಇಲ್ಲಿಗಲ್ ಮೈನಿಂಗ್, ಟ್ರಾನ್ಸ್‌ಪೋರ್ಟೇಷನ್ ಅಂಡ್ ಸ್ಟೋರೇಜ್ ಆಫ್ ಮಿನರಲ್ಸ್) ರೂಲ್ಸ್-2011
4) ಸರ್ಕಾರಿ ಆದೇಶ ಸಂಖ್ಯೆ: ಸಿಐ 21 ಎಂಎಂಎನ್(2) 2014 ಬೆಂಗಳೂರು ದಿನಾಂಕ: 21-01-2014.

** **

ರಾಜ್ಯದಲ್ಲಿ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ಸ್ಥಳೀಯವಾಗಿ ಮತ್ತು ಅಂತರ್ ರಾಜ್ಯಗಳಿಗೆ ಸಾಗಿಸುವುದನ್ನು ಉಲ್ಲೇಖ (1) ಮತ್ತು (3)ರಲ್ಲಿ ನಮೂದಿಸಲಾದ ನಿಯಮಗಳು/ ಅಧಿಸೂಚನೆಯನ್ವಯ ಅಧಿಕೃತ ಪರವಾನಗಿ ಇಲ್ಲದೇ ಮಾಡುವುದನ್ನು ನಿಷೇಧಿಸಲಾಗಿದೆ. ಅನಧಿಕೃತ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ಸಂಗ್ರಹವು ಒಂದು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಆದಾಗ್ಯೂ ಸಹ ರಾಜ್ಯದಲ್ಲಿ ಈ ದಂಧೆಯು ಅವ್ಯಾಹತವಾಗಿ ನಡೆಯುತ್ತಿರುವ ಬಗ್ಗೆ ದೂರುಗಳು ಬರುತ್ತಿದ್ದು, ಇದರಿಂದ ಸರ್ಕಾರಕ್ಕೆ ಮತ್ತು ಇಲಾಖೆಗೆ ಇರುಸು-ಮುರುಸು ಉಂಟಾಗಿರುತ್ತದೆ. ಇದಕ್ಕೆ ಉಲ್ಲೇಖ(1)ರ ಅನ್ವಯ ರಚಿಸಲಾಗಿರುವ ಮರಳು ಸಾಗಾಣಿಕೆ ಎಚ್ಚರಿಕೆ ಸಮಿತಿ **(Task Force)** ಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲವಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಉಲ್ಲೇಖ(1)ರಲ್ಲಿ ನಮೂದಿಸಿದ ನಿಯಮಗಳನ್ವಯ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿರವರ ಅಧ್ಯಕ್ಷತೆಯಲ್ಲಿ ಮರಳು ಸಾಗಾಣಿಕೆ ಎಚ್ಚರಿಕೆ **(Task Force)** ಸಮಿತಿಗಳನ್ನು ರಚಿಸಲಾಗಿದ್ದು, ಸಂಬಂಧಿಸಿದ ಪೊಲೀಸ್ ಆಯುಕ್ತರು/ ಜಿಲ್ಲಾ ಪೊಲೀಸ್ ಅಧೀಕ್ಷಕರು ರವರುಗಳು ಈ ಸಮಿತಿಯ ಸದಸ್ಯರಾಗಿದ್ದಾರೆ. ಅದೇ ರೀತಿ ತಾಲ್ಲೂಕು ಮಟ್ಟದಲ್ಲಿಯೂ ಮರಳು ಸಾಗಾಣಿಕೆ ಎಚ್ಚರಿಕೆ **(Task Force)** ಸಮಿತಿಯನ್ನು ಸಹಾಯಕ ಕಮಿಷನರ್ (ಕಂದಾಯ) ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದು, ಸಂಬಂಧಿಸಿದ ಪೊಲೀಸ್ ಇನ್ಸ್‌ಪೆಕ್ಟರ್/ ಸಬ್-ಇನ್ಸ್‌ಪೆಕ್ಟರ್ ರವರು ಸದಸ್ಯರಾಗಿದ್ದಾರೆ. ಸದರಿ ನಿಯಮಗಳಲ್ಲಿ ಸಮಿತಿಯ ಕಾರ್ಯವ್ಯಾಪ್ತಿ ಮತ್ತು ಕಾರ್ಯ ಚಟುವಟಿಕೆ/ ಜವಾಬ್ದಾರಿಗಳನ್ನು/ ಹೊಣೆಗಾರಿಕೆಯನ್ನು ನಿಗದಿಪಡಿಸಲಾಗಿದ್ದು, ಅಕ್ರಮ ಮರಳು ಗಣಿಗಾರಿಕೆ ಮತ್ತು ಅಕ್ರಮ ಮರಳು ಸಾಗಾಣಿಕೆ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವುದು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ **(Task Force)** ಸಮಿತಿಯ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ. ಸದರಿ ಟಾಸ್ಕ್ ಫೋರ್ಸ್‌ಗಳಲ್ಲಿ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳು ಸಮಿತಿಯ ಸದಸ್ಯರಾಗಿರುತ್ತಾರೆ. ಸಂಬಂಧಿಸಿದ ಪೊಲೀಸ್ ಅಧಿಕಾರಿಗಳು ಇತರ ಇಲಾಖೆಗಳೊಂದಿಗೆ ಸಮನ್ವಯತೆಯನ್ನು ಸಾಧಿಸಿ ಪರಿಣಾಮಕಾರಿಯಾಗಿ ಈ ಹಾವಳಿಯನ್ನು ನಿಯಂತ್ರಿಸುವ ಗುರುತರವಾದ ಜವಾಬ್ದಾರಿಯು ಇಲಾಖೆಯ ಮೇಲಿರುತ್ತದೆ.

ಉಲ್ಲೇಖ(4)ರಲ್ಲಿ ನಮೂದಿಸಿದ ಸರ್ಕಾರದ ಆದೇಶದಲ್ಲಿ ಅಕ್ರಮ ಮರಳು ಸಾಗಾಣಿಕೆ ಕುರಿತು ನಿಗಾವಹಿಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕಂದಾಯ ಇಲಾಖೆ, ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳ ಕಾರ್ಯ ವ್ಯಾಪ್ತಿಯನ್ನು ನಿರ್ಧರಿಸಿ ಅಧಿಸೂಚನೆ ಹೊರಡಿಸಲಾಗಿದೆ. ಈ ಆದೇಶದನ್ವಯ ಪೊಲೀಸ್ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಅಕ್ರಮ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ಸಂಗ್ರಹಕ್ಕೆ ಸಂಬಂಧಿಸಿದಂತೆ ಕ್ರಮತೆಗೆದುಕೊಳ್ಳಲು ಅಧಿಕಾರ ನೀಡಲಾಗಿದ್ದು, ಅದರಂತೆ ಪೊಲೀಸ್ ಇಲಾಖೆಯ ಎಲ್ಲಾ ಘಟಕಾಧಿಕಾರಿಗಳು ಈ ಕೆಳಗಿನಂತೆ ಕ್ರಮತೆಗೆದುಕೊಳ್ಳಲು ಸೂಚಿಸಿದೆ.

1) ಅಕ್ರಮ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ಸಂಗ್ರಹವನ್ನು ತಡೆಗಟ್ಟುವುದು ಆಯಾ ಪ್ರದೇಶದ ಮರಳು ಸಾಗಾಣಿಕೆ ಎಚ್ಚರಿಕೆ (Task Force) ಸಮಿತಿಯ ಜವಾಬ್ದಾರಿಯಾಗಿದೆ. ಈ ಬಗ್ಗೆ ಯಾವುದೇ ರೀತಿಯ ಅಕ್ರಮವನ್ನು ಸಹಿಸಲು (Zero Tolerance) ಆಗುವುದಿಲ್ಲ.

2) ಘಟಕಾಧಿಕಾರಿಗಳು ತಮ್ಮ ಘಟಕದ ವ್ಯಾಪ್ತಿಯಲ್ಲಿ ಬರುವ ಅಕ್ರಮ ಮರಳು ಗಣಿಗಾರಿಕೆ ಕೇಂದ್ರಗಳನ್ನು ಗುರುತಿಸಿ ಅಂತಹ ಕೇಂದ್ರಗಳ ಮೇಲೆ ನಿಗಾವಹಿಸಿ ಅಕ್ರಮ ಮರಳು ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿರ್ಮೂಲನಾ ಮಾಡಲು ತಮ್ಮ ಅಧಿಕಾರ ಉಪಯೋಗಿಸಿ ಕ್ರಮ ತೆಗೆದುಕೊಳ್ಳುವುದಲ್ಲದೇ, ಜಿಲ್ಲಾಮಟ್ಟದ / ತಾಲ್ಲೂಕು ಮಟ್ಟದ (Task Force) ಸಮಿತಿಗಳ ಮೂಲಕ ಸಹ ಕ್ರಮತೆಗೆದುಕೊಳ್ಳುವುದು.

3) ಘಟಕಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಅಂತರ್ ರಾಜ್ಯ ಗಡಿಗಳಲ್ಲಿ ಮರಳು ಅಕ್ರಮ ಸಾಗಾಣಿಕೆ ತಡೆಯುವ ಸಲುವಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಆರಂಭಿಸಲಾಗಿರುವ ತನಿಖಾ ಕೇಂದ್ರಗಳೊಂದಿಗೆ ಸಮನ್ವಯತೆ ಕಾಯ್ದುಕೊಂಡು ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸುವಂತೆ ಕ್ರಮ ತೆಗೆದುಕೊಳ್ಳುವುದು. ಈ ಕೇಂದ್ರಗಳಲ್ಲಿ ಯಾವುದೇ ರೀತಿಯ ಅಕ್ರಮ ಜರುಗುತ್ತಿರುವ ಬಗ್ಗೆ ಮಾಹಿತಿ ಬಂದಲ್ಲಿ ತಡಮಾಡದೇ ಅಂತಹ ಅಧಿಕಾರಿ/ ಸಿಬ್ಬಂದಿಯವರ ಮೇಲೆ ಅಗತ್ಯ ಶಿಸ್ತು ಕ್ರಮಕ್ಕೆ ಸಂಬಂಧಿಸಿದ ಶಿಸ್ತು ಪ್ರಾಧಿಕಾರಕ್ಕೆ ತಕ್ಷಣದ ಶಿಫಾರಸ್ಸು ಮಾಡಲು ಸೂಚಿಸಿದೆ.

4) Karnataka Prevention of Illegal Mining, Transportation and Storage Minerals Rules 2011ರ ನಿಯಮ 6 (Chapter V) ರನ್ವಯ ತನಿಖಾ ಕೇಂದ್ರಗಳಲ್ಲಿ ನಿಯಮಾವಳಿ ಪ್ರಕಾರ ಅಗತ್ಯ ಮೂಲಭೂತ ಸೌಕರ್ಯಗಳಿರುವಂತೆ ನೋಡಿಕೊಳ್ಳುವುದು. ಇಂತಹ ಮೂಲಭೂತ ಸೌಕರ್ಯಗಳ ಕೊರತೆ ಇದ್ದಲ್ಲಿ ಘಟಕಾಧಿಕಾರಿಗಳು ಈ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರ ಗಮನಕ್ಕೆ ತರುವಂತೆ ಸೂಚಿಸಿದೆ.

5) ಘಟಕಾಧಿಕಾರಿಗಳು ಮಾಸಿಕ ಅಪರಾಧ ಸಭೆಯನ್ನು ನಡೆಸುವ ಸಂದರ್ಭದಲ್ಲಿ ಅಕ್ರಮ ಮರಳು ಗಣಿಗಾರಿಕೆ, ಸಾಗಾಣಿಕೆ ಮತ್ತು ಸಂಗ್ರಹಣೆ ಬಗ್ಗೆ ಠಾಣಾವಾರು ಪುನರ್‌ವಿಮರ್ಶೆ ಮಾಡಿ ಅಗತ್ಯ ಸಲಹೆ ಸೂಚನೆಗಳನ್ನು ಅಧೀನ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ನೀಡುವುದು. ಹಾಗೆಯೇ ಉಲ್ಲೇಖ(4)ರನ್ವಯ ಜಿಲ್ಲಾ ಮತ್ತು ತಾಲ್ಲೂಕು (Task Force) ಸಮಿತಿಗಳ ಸಭೆಗಳನ್ನು (ಪ್ರತಿ ಎರಡು ತಿಂಗಳಿಗೊಮ್ಮೆ) ಜರುಗಿಸಿ ಅಲ್ಲಿ ಎಲ್ಲಾ ಇಲಾಖೆಗಳೊಂದಿಗೆ ಈ ಹಾವಳಿಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಕ್ರಮ ತೆಗೆದುಕೊಳ್ಳುವುದು.

6) ಘಟಕಾಧಿಕಾರಿಗಳು ಅಕ್ರಮ ಮರಳು ದಂಧೆಯ ಬಗ್ಗೆ ಗುಪ್ತವಾಗಿ ಮಾಹಿತಿ ಸಂಗ್ರಹಿಸಿ, ಅನಿರೀಕ್ಷಿತವಾಗಿ ದಾಳಿಗಳನ್ನು ನಡೆಸಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಸೂಕ್ತ ಶಿಸ್ತು ಕ್ರಮ ತೆಗೆದುಕೊಳ್ಳುವುದು.

7) ತಮ್ಮ ತಮ್ಮ ವ್ಯಾಪ್ತಿಯಲ್ಲಿ ರೂಢಿಗತವಾಗಿ ಅಕ್ರಮ ಮರಳು ದಂಧೆಯಲ್ಲಿ ಅಪರಾಧವೆಸಗಿರುವ ಆರೋಪಿಗಳ ವಿರುದ್ಧ ಗೂಂಡಾ ಕಾಯ್ದೆಯನ್ವಯ ಕ್ರಮ ತೆಗೆದುಕೊಳ್ಳುವುದು. ಘಟಕಾಧಿಕಾರಿಗಳು ವ್ಯೆಯಕ್ತಿಕವಾಗಿ ಈ ಬಗ್ಗೆ ಗಮನ ಹರಿಸುವುದು.

8) ಘಟಕಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಅಕ್ರಮ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ತಡೆಗಟ್ಟುವಲ್ಲಿ ವಿಫಲವಾದಲ್ಲಿ ಅಂತಹ ಘಟಕಾಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

(ಓಂ ಪ್ರಕಾಶ್ ಐಪಿಎಸ್)
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್

ಇವರಿಗೆ:

1) ಪೊಲೀಸ್ ಆಯುಕ್ತರು, ಬೆಂಗಳೂರು/ ಮೈಸೂರು/ ಹುಬ್ಬಳ್ಳಿ-ಧಾರವಾಡ/ ಮಂಗಳೂರು/ ಬೆಳಗಾವಿ ನಗರ.
2) ಎಲ್ಲಾ ವಲಯ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್
3) ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರುಗಳಿಗೆ, ಕೆ.ಜಿ.ಎಫ್/ರೈಲ್ವೇಸ್ ಒಳಗೊಂಡಂತೆ.

ಪ್ರತಿಯನ್ನು ಅಭಿನಂದನೆಗಳೊಂದಿಗೆ

1) ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು ರವರಿಗೆ
2) ಪ್ರಧಾನ ಕಾರ್ಯದರ್ಶಿಗಳು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ವಿಧಾನಸೌಧ, ಬೆಂಗಳೂರು

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – IV-A<br>Part – IV-A | ಬೆಂಗಳೂರು, ಮಂಗಳವಾರ, ಜನವರಿ ೨೧, ೨೦೧೪ (ಮಾಘ ೧, ಶಕ ವರ್ಷ ೧೯೩೫)<br>Bangalore, Tuesday, January 21, 2014 (Magha 1, Shaka Varsha 1935) | ಸಂ. ೪೫<br>No. 45 |
|---|---|---|

## COMMERCE AND INDUSTRIES SECRETARIAT

## NOTIFICATION

NO: CI 21 MMN (2) 2014, Bangalore, Dated: 21.01.2014

In exercise of the powers conferred by sub-section (3) and (4) of section 21 and section 22 of Mines and Mineral (Regulation and Development) Act, 1957(central Act 67 of 1957) and sub-rule (3) of rule 43 and rule 46 of Karnataka Minor Mineral Concession Rules, 1994 and in modification of Notification No.CII 186/96/19839 dated: 4.2.1993, the Government of Karnataka do hereby authorise the officers/authorities specified in column (2) of the table below in respect of the area specified in the corresponding entries in column (3) thereof, for the purpose of the said sub-section (3) and (4) of section 21 and section 22 of the Act and sub-rule (3) rule 43 and rule 46 of the Karnataka Minor Mineral Concession Rules, 1994.

TABLE

| Sl. No | Designation of Officers/ Authorities | Jurisdiction | Department |
|---|---|---|---|
| (1) | (2) | (3) | (4) |
| 1 | The Additional Director (mineral administration) | Whole of the State | Department of Mines and Geology |
| 2 | The Joint Director, South/North zones | Within their jurisdiction | Department of Mines and Geology |
| 3 | Deputy Director (mineral administration) | Whole of the State | Department of Mines and Geology |
| 4 | The Deputy Commissioner | Respective districts | Revenue Department |
| 5 | The Superintendent of Police/Police commissioner | Within their jurisdiction | Police Department |
| 6 | The Deputy Conservator of Forest | Respective jurisdiction | Forest Department |
| 7 | The Deputy Superintendent of Police | Respective sub-division | Police Department |

| (1) | (2) | (3) | (4) |
|---|---|---|---|
| 8 | Deputy Director/Senior Geologist | Within their jurisdiction | Department of Mines and Geology |
| 9 | The Asst. Commissioner | Respective sub-division | Revenue Department |
| 10 | Geologists | Within their jurisdiction | Department of Mines and Geology |
| 11 | The Tahsildhar | Respective Taluk | Revenue Department |
| 12 | The Circle Inspector /Inspector of police | Within their jurisdiction | Police Department |
| 13 | Sub-Inspector of police | Within their jurisdiction | Police Department |
| 14 | The Revenue Inspector | Respective Hoblies | Revenue Department |
| 15 | The Range Forest Officers | Respective Range | Forest Department |

By order and in the name of the Governor of Karnataka

P.S. KANTHRAJ
Deputy Secretary to Government
Commerce and Industries Department

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು (67) (300 ಪ್ರತಿಗಳು)